# ಹರಿ ಸ್ಮರಣೆ ಮಾಡುವರು ನರರಲ್ಲವೊ

1. **Ref.**: Sri Purandara Dasara Krutigalu – Sri Gorebala Hanumantha Rayara Hasta Prati Sangrahadinda – Published by Sri Varadendra Haridasa Sahitya Mandala, Lingasuguru, Raichur Dist., Karnataka (2013), page No. 328.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the book of Prof. S.K. Ramachandra Rao and also in the books of Sri. Pavanje Guru Rao.
3. **Note:** Singer has followed these lyrics.

ರಾಗ: ಕಾಂಬೋಧಿ ತಾಳ: ಝಂಪೆ

ಹರಿ ಸ್ಮರಣೆ ಮಾಡುವರು ನರರಲ್ಲವೊ
ಶರೀರವವರದು ಎಲ್ಲರಂತಲ್ಲವು || ಪ ||

ಮುರಹರನಿಗೆರಗುವ ಶಿರವು ದ್ವಾರಕಾ ಪುರವು
ಚರಿತೆ ಕೇಳುವ ಕರ್ಣ ಗೋಕರ್ಣವು
ಬಿರಿದು ಹೊಗಳುವ ಜಿಹ್ವೆ ನಿಜ ಕ್ಷೀರಸಾಗರವು
ಚರಣ ಪೂಜಿಸುವ ಕರಗಳೇ ರಾಮೇಶ್ವರ || ೧ ||

ವಿಷ್ಣು ನಿರ್ಮಾಲ್ಯಾಘ್ರಾಣಿಸುವ ನಾಸಿಕ ಕಂಚಿ
ಕೃಷ್ಣನ ನೋಡುವ ದೃಷ್ಟಿ ಶ್ರೀಮುಷ್ಣವು
ವಿಠಲಗರ್ಪಿತನಂಬುವ ಉದರವೇ ಬದರಿ
ಘಟ್ಯಾಗಿ ಹರಿಯಿಪ್ಪ ಹೃದಯವೇ ವೈಕುಂಠ || ೨ ||

ವರ ಜಂಘೆ ಪದ ಗಂಗೆ ತುಂಗೆಯಂದೆನಿಸುವದು
ಸರುವಾಂಗ ಅನಂತಾಸನ ಶ್ವೇತದ್ವೀಪ
ಬರಿಯ ಮಾತಲ್ಲವಿದು ಶೃತಿ ಪುರಾಣಗಳುಕ್ತಿ
ಪುರಂದರ ವಿಠಲ ಅವರ ವಶದೊಳಿಹ್ಯನು || ೩ ||

**Classification:** Keerthane
**Ankita:** purandara vittala

**Location:** NA

**Category:** Nama Smarane

**Sub-Category:** Krishna, smarane, deha, nara, kivi, dwaraka, gokarna, nalige, halu, Samudra, puje, kai, rameshwara, nirmalya, Vishnu, moogu, kanchi, srimushna, udara, badari, hrudaya, vaikunta, gange, nadi, shruti, purana,

**Pravachana:** NA

**Explanation:** NA